# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 175 (171)
ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 10.12.2024
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಹೊಸ ಮಹಾಯೋಜನೆ ನಕ್ಷೆಯನ್ನು ಯಾವಾಗ ಪ್ರಕಟಿಸಬೇಕಾಗಿತ್ತು;</td><td>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಹಾಯೋಜನೆ ನಕ್ಷೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 554 ಮೈಅಪ್ರಾ 2010, ದಿನಾಂಕ:07.12.2010 ರಂದು ಅನುಮೋದನೆ ನೀಡಿದ್ದು ಚಾಲ್ತಿಯಲ್ಲಿರುತ್ತದೆ. ಸದರಿ ಮಹಾಯೋಜನೆಯ ಪರಿಷ್ಕರಣೆ ಕಾರ್ಯ ಪ್ರಾಧಿಕಾರದ ಹಂತದಲ್ಲಿ ಪೂರ್ಣಗೊಂಡಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.</td></tr>
<tr><td>(ಆ)</td><td>ಇದುವರೆಗೂ ಹಳೇ ಮಹಾಯೋಜನೆಯನ್ನು ಅನುಸರಿಸಿಯೇ ಭೂ ಉಪಯೋಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು, ಸರ್ಕಾರದ ಆದೇಶ ಸಂಖ್ಯೆ:ನಅಇ 554 ಮೈಅಪ್ರಾ 2010, ದಿನಾಂಕ:07.12.2010 ರಂದು ಅನುಮೋದನೆ ನೀಡಿರುವ ಮಹಾಯೋಜನೆಯ ಊರ್ಜಿತ ಅವಧಿಯು ಹೊಸದಾಗಿ ಮಹಾಯೋಜನೆ ನಕ್ಷೆಗೆ ಸರ್ಕಾರದಿಂದ ಅನುಮೋದನೆಯಾಗುವವರೆಗೂ ಚಾಲ್ತಿಯಲ್ಲಿರುತ್ತದೆ. ಅದರಂತೆ ನಕ್ಷೆಯನ್ನು ಅನುಸರಿಸಿ ಭೂ ಉಪಯೋಗ ನೀಡಲಾಗುತ್ತಿದೆ.</td></tr>
<tr><td>(ಇ)</td><td>ಹೊಸ ಮಹಾಯೋಜನೆಯನ್ನು ತಯಾರಿಸಿ ಪ್ರಕಟಿಸಿ ಅಳವಡಿಸಿಕೊಳ್ಳಲು ಇರುವ ತೊಡಕುಗಳೇನು;</td><td rowspan="2">ಯಾವುದೇ ತೊಡಕುಗಳು ಇರುವುದಿಲ್ಲ. ಈ ಸಂಬಂಧ ಕರಡು ಮಹಾಯೋಜನೆ ಪರಿಷ್ಕೃತ-II ನ್ನು ಸರ್ಕಾರಕ್ಕೆ ಸಲ್ಲಿಸಲು ದಿ:08.11.2024 ರಂದು ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರಕ್ಕೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು.</td></tr>
<tr><td>(ಈ)</td><td>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಹೊಸ ಮಹಾಯೋಜನೆಯನ್ನು ಯಾವಾಗ ಪ್ರಕಟಿಸಲಿದೆ : ಇದಕ್ಕಾಗಿ ಮಾಡಿಕೊಂಡಿರುವ ಸಿದ್ಧತೆಗಳೇನು ಮತ್ತು ಒಪ್ಪಂದಗಳೇನು?</td></tr>
</table>

ಕಡತ ಸಂಖ್ಯೆ: ನಅಇ 458 ಮೈಅಪ್ರಾ 2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.